**OS-46/2022** **ಪಿ.ಡಬ್ಲ್ಯೂ-1 (ಭಾರತಿ)**

ದಿನಾಂಕಃ **03.08.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀಮತಿ. ಎಂ.ಎಂ.ಬಿ. ವಕೀಲರಿಂದ :**

ವಾದಿ ಗೌರಮ್ಮ ನನ್ನ ತಾಯಿ. ಅವರ ಪರವಾಗಿ ನಾನು ಸಾಕ್ಷಿ ವಿಚಾರಣೆ ನುಡಿಯುತ್ತಿದ್ದೇನೆ. ಎಲ್ಲಾ ಮಾಹಿತಿಗಳು ನನಗೆ ಗೊತ್ತಿದೆ. ವಾದಿಯ ತಂದೆ ಅಂದರೆ ನನ್ನ ತಾತ ಚಿಕ್ಕಣ್ಣಗೌಡರಿಗೆ ದಾವಾ ಸ್ವತ್ತುಗಳು ಎಲ್ಲವೂ ಅವರ ತಂದೆಯಿಂದ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆ. ದಾವಾ ಸ್ವತ್ತುಗಳಲ್ಲದೇ ಕೂಡ್ಲುಕುಪ್ಪೆ ಎಂಬಲ್ಲಿ ಪಿತ್ರಾರ್ಜಿತವಾದ ಮನೆಯೂ ಸಹ ಇದೆ. ಕುಟುಂಬದ ಎಲ್ಲಾ ಸದಸ್ಯರು ದಾವಾ ಸ್ವತ್ತಿನ ಜಂಟಿ ಸ್ವಾಧೀನಾನುಭವದಲ್ಲಿರುತ್ತೇವೆ. 2 ನೇ ಪ್ರತಿವಾದಿ ಮತ್ತು ನಾನು ಸಂಬಂಧದಲ್ಲಿ ಅಪ್ಪಟಕ್ಕಪ್ಪೆ. ದಾವಾ ಸ್ವತ್ತುಗಳ ಪೈಕಿ ಸರ್ವೆ ನಂ.9 ಕ್ಕೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ 110/2011 ಪ್ರಧಾನ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣದಲ್ಲಿ ಘೋಷಣಾತ್ಮಕ ಪರಿಹಾರ ಕೋರಿ ನನ್ನ ತಾಯಿ ಅಂದರೆ ವಾದಿಯನ್ನು ಪ್ರತಿವಾದಿಯಾಗಿ ಸೇರಿಸಿ 2 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯು ಇನ್ನೂ ಇತ್ಯರ್ಥಕ್ಕೆ ಬಾಕಿ ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ.

2. ಸರ್ವೆ ನಂ.8 ಮತ್ತು 9 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳಿವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳೆಲ್ಲವೂ ಮೃತ ಚಿಕ್ಕಣ್ಣ ಮತ್ತು 3 ನೇ ಪ್ರತಿವಾದಿಯ ಗಂಡ ಮೃತ ಕೆ.ಸಿ.ಸ್ವಾಮಿರವರ ಹೆಸರಿನಲ್ಲಿ ದಾಖಲೆಗಳು ಇವೆ. ದಾವಾ ಸ್ವತ್ತುಗಳ ವಿವರಗಳನ್ನು ನನ್ನ ತಾಯಿ ಕೊಟ್ಟಿರುತ್ತಾರೆ. ದಾವಾ ಐಟಂ ನಂ.1 ಸರ್ವೆ ನಂ.8/1 ಶಿವಮ್ಮ ಅಂದರೆ 3 ನೇ ಪ್ರತಿವಾದಿಯ ಹೆಸರಿನಲ್ಲಿದೆ. ದಾವಾ ಸ್ವತ್ತುಗಳು ಮೃತ ಚಿಕ್ಕಣ್ಣ ಹಾಗೂ ಸ್ವಾಮಿರವರ ಹೆಸರುಗಳಲ್ಲಿ ಬೇರೆ ಬೇರೆಯಾಗಿ ನಮೂದಾಗಿ ಬರುತ್ತಿದೆ ಎಂದರೆ ಗೊತ್ತಿಲ್ಲ. ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿಯವರ ಹೆಸರಿನಲ್ಲಿರುವ ವಿಚಾರ ನಮಗೆ ಗೊತ್ತಾಯಿತು. ಅವರ ಹೆಸರುಗಳಿಗೆ ಖಾತೆಗಳು ಯಾವ ಆಧಾರದ ಮೇಲೆ ಬದಲಾವಣೆ ಆಗಿರುತ್ತದೆ ಎಂದು ಗೊತ್ತಿಲ್ಲ ಮತ್ತು ಈ ಬಗ್ಗೆ

ತಿಳಿದುಕೊಂಡಿಲ್ಲ. ಸದರಿ ವಿಚಾರ ಈಗ್ಗೆ 1 ವರ್ಷಗಳ ಹಿಂದೆ ಗೊತ್ತಾಯಿತು.

3. 4ನೇ ಪ್ರತಿವಾದಿಯ ಗಂಡನ ತಂದೆಯ ಗೋವಿಂದೇಗೌಡ ಎಂದರೆ ಗೊತ್ತಿಲ್ಲ. 4ನೇ ಪ್ರತಿವಾದಿಯ ಗಂಡನ ಊರು ಕೆನ್ನಾಳು ಎಂದರೆ ಸರಿ. ದಾವಾ ಸ್ವತ್ತುಗಳ ನಿಖರ ಚೆಕ್ಕುಬಂಧಿಗಳನ್ನು ದಾವಾ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂ.8 ರ ಒಟ್ಟು ವಿಸ್ತೀರ್ಣ 1 ಎಕರ 23 ಗುಂಟೆ ಮತ್ತು ಸರ್ವೆ ನಂ.9 ರ 2 ಎಕರೆ 13 ಗುಂಟೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಸರ್ವೆ ನಂ. 9 ರ ಅಸ್ಥಿತ್ವದಲ್ಲಿರುವ ವಿಸ್ತೀರ್ಣಕ್ಕಿಂತ ಹೆಚ್ಚಾಗಿ ದಾವೆಯಲ್ಲಿ ಅದರ ವಿಸ್ತೀರ್ಣವನ್ನು ತೋರಿಸಲಾಗಿದೆ ಎಂದರೆ ಸರಿಯಲ್ಲ. ಸ್ವತ್ತುಗಳ ಕುರಿತು ಸರಿಯಾದ ಮಾಹಿತಿ ಇಲ್ಲದೇ ಇರುವುದರಿಂದ ಸ್ವತ್ತುಗಳ ವಿಸ್ತೀರ್ಣವನ್ನು ಮತ್ತು ಅವುಗಳ ಚೆಕ್ಕುಬಂಧಿಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ತಮ್ಮಗಳ ಜೀವಿತಾವಧಿಯಲ್ಲಿ ಸಹೋದರರಾದ ಮೃತ ಚಿಕ್ಕಣ್ಣ ಮತ್ತು ಕೆ.ಸಿ.ಸ್ವಾಮಿ ರವರು 14.06.1984 ರಲ್ಲಿ ಪಂಚಾಯಿತಿ ಪಾಲುಪಟ್ಟಿಯಂತೆ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಅವರವರ ಹಿಸ್ಸೆಯ ಸ್ವತ್ತುಗಳ ಖಾತೆಗಳನ್ನು ಪಾಲುಪಟ್ಟಿಯಂತೆ ಬದಲಾಯಿಸಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

5. 4ನೇ ಪ್ರತಿವಾದಿಯ ಗಂಡ ದಾವೆ ಸಲ್ಲಿಸಿದ ನಂತರ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯ ಗಂಡನೂ ಸಹ ಸದರಿ ಪಾಲುಪಟ್ಟಿಗೆ ಸಾಕ್ಷಿದಾರನಾಗಿ ಸಹಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ಚಿಕ್ಕಣ್ಣ ಮತ್ತು ಕೆ.ಸಿ. ಸ್ವಾಮಿ 40 ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಮಾಡಿಕೊಂಡಿರುತ್ತಾರೆ. ವ್ಯಾಪಾರ, ವ್ಯವಹಾರ, ವ್ಯವಸಾಯವನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. 1984 ರಲ್ಲಿಯೇ ಕುಟುಂಬದ ಸ್ವತ್ತುಗಳು ವಿಭಾಗ ಆಗಿರುವುದರಿಂದ ನನಗೆ ಯಾವುದೇ ಹಿಸ್ಸೆಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಾಹಿತಿ ನನ್ನ ಖುದಉದ ತಿಳುವಳಿಕೆಗೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಿಕ್ಕಣ್ಣೇಗೌಡರ ಎಲ್ಲಾ ಆಸ್ತಿಗಳನ್ನು ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**(6 ರಿಂದ 8 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ. ಸದರಿ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಮತ್ತು ಯಾವುದೇ ಪಾಟೀ ಸವಾಲಿಗೆ ಮುಂದೂಡಲು ಯಾವುದೇ ಸಕಾರಣ ಇರುವುದಿಲ್ಲ. ಉಳಿದ ಪ್ರತಿವಾದಿಯರು ಮತ್ತು ಪ್ರತಿವಾದಿ ಪರ ವಕೀಲರು ಹಾಜರಿರುವುದಿಲ್ಲ. ಆದುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

**1 ನೇ ಅಪರ ಹಿರಿಯ ಸಿಜೆ.,**
**ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**